**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 16-06-2026:**

**ಮುಂದುವರೆದ ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

ಪ್ರತಿವಾದಿ ನನಗೆ ಗುಂಟೆಗೆ 5ಸಾವಿರ ರೂಪಾಯಿಯಂತೆ ಲೈನ ಎಳೆದ ಜಾಗಕ್ಕೆ ಪರಿಹಾರ ಕೊಟ್ಟಿರುತ್ತಾರೆ ಎಂದರೆ ಸರಿ. ಆ ಪರಿಹಾರವನ್ನು ಜಿಲ್ಲಾಧಿಕಾರಿಗಳು ನಿಗಧಿಪಡಿಸಿರುವುದು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಏನು ಮಾಡಿದ್ದಾರೆಂದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ಜಾಗದಲ್ಲಿ ಕಂಬ ಹಾಕಿದ ಬಗ್ಗೆ ನನಗೆ 2,25,000ರೂಪಾಯಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 2ಲಕ್ಷ ರೂಪಾಯಿ ನಮ್ಮ ಕೈಗೆ ಬಂದಿದೆ ಎನ್ನುತ್ತಾರೆ. ಭೂಮಿಗೆ 40,150ರೂಪಾಯಿ ಕೊಟ್ಟಿರುತ್ತಾರೆ ಎಂದರೆ ಸರಿ.

ನಮ್ಮ ಜಮೀನಿಗೆ ಜಾಸ್ತಿ ಪರಿಹಾರ ಕೊಡಿ ಎನ್ನುವ ಬಗ್ಗೆ ನನ್ನಲ್ಲಿ ದಾಖಲೆ ಇರುವುದಿಲ್ಲ. ಅಲ್ಲಿ ಸುತ್ತಮುತ್ತ ಜಾಗ ಮಾರಾಟವಾಗಿರುವ ಬಗ್ಗೆ ದಾಖಲೆಯನ್ನು ಉಪನೋಂದಣಾಧಿಕಾರಿಗಳ ಕಛೇರಿಯಿಂದ ಪಡೆದು ಹಾಜರುಪಡಿಸಿಲ್ಲ. ಸುತ್ತಮುತ್ತ ಜಾಗ ಮಾರಾಟ ಆಗಿರುತ್ತದೆ. ಜಿಲ್ಲಾಧಿಕಾರಿಗಳು ಕಾರಿಡಾರ್ ಹಾದುಹೋದ ಜಾಗಕ್ಕೆ ಎಕರೆಗೆ 2ಲಕ್ಷ ರೂಪಾಯಿ ನಿಗಧಿಪಡಿಸಿರುತ್ತಾರೆ ಎಂದರೆ ಸರಿ. ಆ ಲೈನ್ ಕೆಳಗಡೆ ರಾಗಿ ಜೋಳ ಬೆಳೆಯಬಹುದು ಎಂದರೆ ಸಾಕ್ಷಿಯು ನಾವು ಹೆದರಿಕೊಂಡು ಅಲ್ಲಿಗೆ ಹೋಗುತ್ತಿಲ್ಲ, ಜಾನುವಾರು ತೆಗೆದುಕೊಂಡು ಹೋಗಲು ಹೆದರಿಕೆ ಆಗುತ್ತಿದೆ ಎನ್ನುತಾರೆ. ಆ ಪ್ರದೇಶಕ್ಕೆ ಮಾರುಕಟ್ಟೆ ಬೆಲೆಗಿಂತ ಜಾಸ್ತಿ ಬೆಲೆಯನ್ನು ಜಿಲ್ಲಾಧಿಕಾರಿಗಳು ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**